# ಮೊಗೆದಷ್ಟೂ ಮಧುರ ನೆನಪು!

ಕನ್ನಡದ ಅಪರೂಪದ ಛಂದಸ್ಸು, ತ್ರಿಪದಿ ಹಾಗೂ ಸಾಂಗತ್ಯಗಳನ್ನು ಉಳಿಸಲೆಂದೇ ಹಠ ತೊಟ್ಟು ಬರೆದ ಮಹಾನ್ ಸಾಹಿತಿ, ಆಡಳಿತಗಾರ, ಉಪನ್ಯಾಸಕ, ಭಾಷಣಕಾರ, ಮುಕ್ತಕಗಳ ದೊರೆ.. ಹೀಗೆ ಬಹುರೂಪಗಳಲ್ಲಿ ಹೆಸರು ಮಾಡಿದ್ದ ಎಸ್‌ವಿಪಿ ಅವರನ್ನು ಬಾನುಲಿಗೆ ಮಾತನಾಡಿಸಿದ್ದು ನನ್ನ ಸೌಭಾಗ್ಯ.

■ ವಾ.ಮುರಲೀಧರ ತೀರ್ಥಹಳ್ಳಿ



ಎಸ್‌ವಿ ಪರಮೇಶ್ವರ ಭಟ್ಟರೊಂದಿಗೆ ಮಧುರ ಕ್ಷಣ..

ಹಳತಾದಷ್ಟೂ ಸಿಹಿ ಸಿಹಿ ಎನಿಸುವ ಈ ಮಧುರ ನೆನಪಿಗೆ ಈಗ ಮೂವತ್ತರ ಹರೆಯ! ಇದು ನನಗೆ ಬಯಸದೆ ಬಂದ ಭಾಗ್ಯ ಎನ್ನಬಹುದು. ಬಹುತೇಕ ಎಲ್ಲ ಸಂಸ್ಕೃತ ಕಾವ್ಯಗಳನ್ನು ಅನುವಾದಿಸಿ 'ಕನ್ನಡದ ಕಾಳಿದಾಸ' ಎಂದೇ ಖ್ಯಾತರಾದ, ನಮ್ಮ ಊರಿನವರಾದ ಎಸ್.ವಿ. ಪರಮೇಶ್ವರ ಭಟ್ಟರನ್ನು ಭದ್ರಾವತಿ ಬಾನುಲಿ ಕೇಂದ್ರಕ್ಕೆ ಸಂದರ್ಶಿಸುವ ಅವಕಾಶ ನನಗೆ ಮೂರು ದಶಕಗಳ ಹಿಂದೆ ಸಿಕ್ಕಿತ್ತು.

ಕನ್ನಡದ ಅಪರೂಪದ ಛಂದಸ್ಸು, ತ್ರಿಪದಿ ಹಾಗೂ ಸಾಂಗತ್ಯಗಳನ್ನು ಉಳಿಸಲೆಂದೇ ಹಠ ತೊಟ್ಟು ಬರೆದ ಮಹಾನ್ ಸಾಹಿತಿ, ಆಡಳಿತಗಾರ, ಉಪನ್ಯಾಸಕ, ಭಾಷಣಕಾರ, ಮುಕ್ತಕಗಳ ದೊರೆ.. ಹೀಗೆ ಬಹುರೂಪಗಳಲ್ಲಿ ಹೆಸರು ಮಾಡಿದ್ದ ಎಸ್‌ವಿಪಿ ಅವರನ್ನು ಬಾನುಲಿಗೆ ಮಾತನಾಡಿಸಿದ್ದು ನನ್ನ ಸೌಭಾಗ್ಯವೇ ಸರಿ. ಜತೆಗೆ ಈ ಮಹಾ ವ್ಯಕ್ತಿಯ ಜತೆಯಲ್ಲಿ ಕಪ್ಪು ಬಿಳಿಪು ಭಾವಚಿತ್ರ ತೆಗೆಸಿಕೊಂಡಿದ್ದು ಕೂಡ ನನ್ನ ಜೀವನದ ಸವಿ ನೆನಪುಗಳಲ್ಲಿ ಅಗ್ರಗಣ್ಯವಾದುದು.

ತೀರ್ಥಹಳ್ಳಿ ಸಮೀಪದ ಮಜ್ಜಿಗೆಸರ ಗ್ರಾಮ ಅವರ ಸಹೋದರಿಯ ಊರು. ಅಲ್ಲಿಗೆ ಬಂದಿದ್ದ ಅವರನ್ನು ಸಂದರ್ಶಿಸಲು ಬರುತ್ತಿರುವುದಾಗಿ ದೂರವಾಣಿ ಮೂಲಕ ತಿಳಿಸಿ ನಾನೂ ಕಚೇರಿಗೆ ರಜೆ ಹಾಕಿ ಸಿದ್ಧನಾದೆ. ದಾರಿಯಲ್ಲಿ ಆಕಾಶವಾಣಿಯ ಕಾರನ್ನೇರಿದೆ. ಡಾಕ್ಟರ್ ವಸಂತ ಕವಲಿ ಅಂದಿನ ನಿಲಯ ನಿರ್ದೇಶಕರು. ಬುಕ್ಲಾಪುರದ ತಿರುವಿನಲ್ಲಿ ಕಾರು ನಿಂತುಬಿಟ್ಟಿತು. ಘಾಟಿಯ ತಿರುವಿನಂತೆ ಇದ್ದ ರಸ್ತೆ ನೋಡಿ ಚಾಲಕ ಹೆದರಿಕೊಂಡಿದ್ದ. ನಮ್ಮನೆಲ್ಲ ಇಳಿಸಿಯೂ ಬಿಟ್ಟ. ಯಾರದೋ ಅಡಿಕೆ ತೋಟದೊಳಗೆ ಹಾದು ಮಜ್ಜಿಗೆಸರದ ಹಾದಿ ಹಿಡಿದೆವು. ಕವಲಿಯವರು ದಾರಿಯಲ್ಲಿ ಹಕ್ಕಿಗಳ ಚಿಲಿಪಿಲಿ ಜೀರುಂಡೆಗಳ ಸದ್ದನ್ನು ಧ್ವನಿ ಮುದ್ರಿಸಿಕೊಂಡಾಗ ಅಚ್ಚರಿಯಾಗಿತ್ತು.

ಮಜ್ಜಿಗೆಸರದ ಚಿದಂಬರಯ್ಯನವರ ಮನೆಯಂಗಳದಲ್ಲಿ, ಅಡಿಕೆ  ಚಪ್ಪರದ ಅಡಿಯಲ್ಲಿ ನಾಲ್ಕಾರು ಕುರ್ಚಿ ಬೆಂಚುಗಳನ್ನು ಜೋಡಿಸಿ ವೇದಿಕೆ ನಿರ್ಮಿಸಿದೆವು. ಆಕಾಶವಾಣಿಯ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರೂ ನನಗೆ ಆ ಅವಕಾಶ ನನಗೇ ಸಿಗುತ್ತದೆ ಎಂದು ಗೊತ್ತಿರಲಿಲ್ಲ. ಸಿಕ್ಕ ನಂತರ ಅಳುಕು ಶುರುವಾಯಿತು. ನನ್ನ ಅಳುಕನ್ನು ಎಸ್‌ವಿಪಿ ಅವರಲ್ಲೇ ನಿವೇದಿಸಿಕೊಂಡೆ. ಅವರು 'ಅದಕ್ಯಾಕೆ ಅಂಜಿಕೆ? ನೀವು ನಿಮಗೆ ಬೇಕಾದ ಪ್ರಶ್ನೆಗಳನ್ನು ಆರಾಮವಾಗಿ ಕೇಳಿ. ನಾನು ನನಗೆ ಬೇಕಾದ ಉತ್ತರಗಳನ್ನು ಕೊಡ್ತೀನಿ' ಎಂದು ವಾತಾವರಣ ತಿಳಿಗೊಳಿಸಿದರು. ಅವರು ತುಂಬಿದ ಆತ್ಮವಿಶ್ವಾಸದಿಂದ ಸುಲಲಿತವಾಗಿ ನಡೆದ ಸಂದರ್ಶನ ಹಕ್ಕಿಗಳ ಇಂಚರ ಹಾಗೂ ಜೀರುಂಡೆ ಸದ್ದಿನೊಂದಿಗೆ ಬಾನುಲಿಯಾಗಿ ಪ್ರಸಾರವಾಗಿ ನನಗೆ ಹೆಸರು ತಂದುಕೊಟ್ಟಿತು.

ಆ ಧ್ವನಿಮುದ್ರಣ ಮತ್ತು ಈ ಫೋಟೊ ಇಂದಿಗೂ ನನ್ನ ಮನೆ ಮನಗಳಲ್ಲಿ ಮರೆಯದ ನೆನಪಾಗಿದೆ. ■